**ಕರ್ನಾಟಕ ಸರ್ಕಾರ**

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಕೇಂದ್ರೀಕೃತ ದಾಖಲಾತಿ ಘಟಕ,**
**ಸೆಂಟ್ರಲ್ ಜೂನಿಯರ್ ಕಾಲೇಜು ಆವರಣ, ಕೆ.ಜಿ.ರಸ್ತೆ, ಬೆಂಗಳೂರು–560009**

ಸಂಖ್ಯೆ:ಸಿಎಸಿ–6/ಟಿ.ಇ.ಟಿ.ಪರೀಕ್ಷೆ/2018–19 ದಿನಾಂಕ: 05.12.2018

**2018-19 ನೇ ಸಾಲಿನಲ್ಲಿ ಟಿ.ಇ.ಟಿ. ಪರೀಕ್ಷೆಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳಿಗೆ ಮುಖ್ಯವಾದ ಸೂಚನೆಗಳ ಹೊತ್ತಿಗೆ.**

1. ಅರ್ಹ ಅಭ್ಯರ್ಥಿಗಳು ಇಲಾಖೆಯ ವೆಬ್‌ಸೈಟ್ www.schooleducation.kar.nic.in ರಲ್ಲಿ ಆನ್‌ಲೈನ್ ಅರ್ಜಿ ಭರ್ತಿ ಮಾಡತಕ್ಕದ್ದು. ಬೇರೆ ಯಾವುದೇ ಅರ್ಜಿ ಅಥವಾ ಮುದ್ರಿತ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. **“ONLINE”** ನಲ್ಲಿ ಹೊರತು ಪಡಿಸಿ ಬೇರೆ ಯಾವುದೇ ರೀತಿಯಲ್ಲಿ ಅರ್ಜಿ ಸಲ್ಲಿಸುವುದನ್ನು ನಿಷೇಧಿಸಲಾಗಿದೆ.
2. ಅರ್ಜಿಯನ್ನು ಭರ್ತಿ ಮಾಡುವ ಮುನ್ನ ಈ ಕೆಳಕಂಡ ಸೂಚನೆಗಳನ್ನು ತಪ್ಪದೇ ಓದಿಕೊಂಡು ನಂತರ ಭರ್ತಿ ಮಾಡುವುದು.
3. ಅರ್ಜಿಗಳನ್ನು ಸಲ್ಲಿಸಲು ಕೊನೆಯ ದಿನಾಂಕಃ 25.12.2018 ಆಗಿರುತ್ತದೆ.
4. ಆನ್‌ಲೈನ್ ಮೂಲಕ ಅರ್ಜಿಯನ್ನು ಭರ್ತಿಮಾಡುವ ಸಂದರ್ಭದಲ್ಲಿ ತಾಂತ್ರಿಕ ತೊಂದರೆ ಅಥವಾ ಸಮಸ್ಯೆ ಎದುರಾದಲ್ಲಿ ಈ ಕೆಳಕಂಡ ದೂರವಾಣಿಯ ಮೂಲಕ ಸಂಪರ್ಕಿಸಿ ಅಗತ್ಯ ಮಾಹಿತಿಯನ್ನು ಪಡೆದು ಅರ್ಜಿಯನ್ನು ಸಲ್ಲಿಸಬಹುದಾಗಿದೆ.
5. ಅರ್ಹ ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಲು ನಿಗದಿಪಡಿಸಿದ ಕೊನೆಯ ದಿನಾಂಕದವರೆಗೆ ಕಾಯದೇ ಮುಂಚಿತವಾಗಿ ಅರ್ಜಿಗಳನ್ನು ಸಲ್ಲಿಸತಕ್ಕದ್ದು.
6. ನಿಗದಿತ ದಿನಾಂಕದ ನಂತರ ಶುಲ್ಕವನ್ನು ಪಾವತಿಸಿದ ಅಭ್ಯರ್ಥಿಗಳ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
7. ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವ ಸಮಯದಲ್ಲಿ ವಿದ್ಯುತ್ ಕಡಿತಗೊಂಡಲ್ಲಿ ಅಥವಾ ಇತರೆ ತಾಂತ್ರಿಕ ತೊಂದರೆಗಳು ಉಂಟಾದಲ್ಲಿ ಮತ್ತೆ ಅರ್ಜಿಯನ್ನು ಭರ್ತಿ ಮಾಡುವ ಕಾರ್ಯವನ್ನು ಮುಂದುವರೆಸಲು ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಗಳು ಆನ್‌ಲೈನ್ ಅರ್ಜಿ ಮೂಲಕ ನೀಡಿರುವ ಮಾಹಿತಿಗಳನ್ನು ಶುಲ್ಕವನ್ನು ಪಾವತಿಸಿದ ನಂತರ ಬದಲಾವಣೆಗೆ ಅವಕಾಶವಿರುವುದಿಲ್ಲ.

8. ಒಂದು ವೇಳೆ ಅಭ್ಯರ್ಥಿಗಳು ಆನ್‌ಲೈನ್ ಮೂಲಕ ಅರ್ಜಿಯನ್ನು ಸಲ್ಲಿಸಿದ ನಂತರ ತಿದ್ದುಪಡಿ ಮಾಡುವ ಅಗತ್ಯತೆ ಕಂಡು ಬಂದಲ್ಲಿ ಹೊಸದಾಗಿ ಶುಲ್ಕವನ್ನು ಪಾವತಿಸಿ ಹೊಸ ಅರ್ಜಿಯನ್ನು ಸಲ್ಲಿಸತಕ್ಕದ್ದು.
9. ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿಗಳು ದೋಷಪೂರಿತ ಹಾಗೂ ತಪ್ಪು ಮಾಹಿತಿಗಳನ್ನು ಒಳಗೊಂಡಿದ್ದಲ್ಲಿ ಅಭ್ಯರ್ಥಿಗಳೇ ಸಂಪೂರ್ಣವಾಗಿ ಜವಾಬ್ದಾರರಾಗಿರುತ್ತಾರೆ ಹಾಗೂ ಅಂತಹ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
10. ಅರ್ಜಿ ಶುಲ್ಕ ಪಾವತಿಸಲು ನಿಗಧಿಪಡಿಸಿರುವ ಕೊನೆಯ ದಿನಾಂಕದೊಳಗಾಗಿ **Online** ಮೂಲಕ **Credit Card, Debit Card, Net banking** ಅಥವಾ **Cash** ಮೂಲಕ ಹಣ ಪಾವತಿಸಬಹುದಾಗಿದೆ. ಅರ್ಜಿ ಶುಲ್ಕ ಪಾವತಿಸದೇ ಇರುವ ಅಭ್ಯರ್ಥಿಗಳ **Online** ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಬೇರಾವುದೇ ಬ್ಯಾಂಕಿನಲ್ಲಿ ಹಣ ಪಾವತಿಸಿದಲ್ಲಿ ಬ್ಯಾಂಕ್ ಹುಂಡಿ, ಪೋಸ್ಟಲ್ ಆರ್ಡರ್, ಮನಿ ಆರ್ಡರ್ ಅಥವಾ ಇನ್ನಾವುದೇ ಸ್ವರೂಪದಲ್ಲಿ ಶುಲ್ಕ ಪಾವತಿಸತಕ್ಕದ್ದಲ್ಲ ಹಾಗೂ ಅಂತಹ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.
11. ಒಮ್ಮೆ ಪಾವತಿಸಿದ ಅರ್ಜಿಯ ಶುಲ್ಕವನ್ನು ಯಾವುದೇ ಕಾರಣಗಳಿಗೂ ಹಿಂದಿರುಗಿಸಲಾಗುವುದಿಲ್ಲ ಅಥವಾ ಹೊಂದಾಣಿಕೆ ಮಾಡಲಾಗುವುದಿಲ್ಲ.
12. ಅಭ್ಯರ್ಥಿಗಳು ತಮ್ಮ ಇತ್ತೀಚಿನ ಬಾವಚಿತ್ರ ಮತ್ತು ಸಹಿಯನ್ನು ಅಪ್‌ಲೋಡ್ ಮಾಡಬೇಕು. ಇದರೊಂದಿಗೆ ಶುಲ್ಕ ವಿನಾಯಿತಿ ಬಯಸಿ ಅರ್ಜಿ ಸಲ್ಲಿಸುವ ವಿಕಲಚೇತನ ಅಭ್ಯರ್ಥಿಗಳು **PH Cetificate Number** ನ್ನು ತಪ್ಪದೆ ನಮೂದಿಸುವುದು.
13. ಅಭ್ಯರ್ಥಿಗಳು **Online** ಅರ್ಜಿ ಮೂಲಕ ನೀಡಿರುವ ಮಾಹಿತಿಗಳ ಬಗ್ಗೆ ಯಾವುದೇ ಹಂತದಲ್ಲೂ ಬದಲಾವಣೆಗೆ ಅವಕಾಶವಿರುವುದಿಲ್ಲ.
14. **Online** ಅರ್ಜಿಯ ಮೂಲಕ ನೀಡಿರುವ ಮಾಹಿತಿಗಳನ್ನೇ ಆಧಾರವಾಗಿಟ್ಟುಕೊಂಡು ಅಭ್ಯರ್ಥಿಗಳ ಪರೀಕ್ಷೆಯನ್ನು ಬರೆಯುವ ಅರ್ಹತೆ, ಪರೀಕ್ಷೆಯ ಪ್ರಶ್ನೆ ಪತ್ರಿಕೆ ಹಾಗೂ ಪರೀಕ್ಷೆಯಲ್ಲಿ ಅರ್ಹತೆ ಗೊಂಡಲ್ಲಿ ಅರ್ಹತಾ ಪತ್ರವನ್ನು ನಿರ್ಧರಿಸುವುದರಿಂದ ಯಾವುದೇ ಹಂತದಲ್ಲಿ ಅಪೂರ್ಣ / ಅಸ್ಪಷ್ಟ / ತಪ್ಪು ಮಾಹಿತಿ ನೀಡಿದಲ್ಲಿ ಅಭ್ಯರ್ಥಿಗಳೇ ಸಂಪೂರ್ಣ ಹೊಣೆಗಾರರಾಗಿರುತ್ತಾರೆ.
15. ಯಾವುದೇ ದಾಖಲೆಗಳನ್ನು ಅಂಚೆ ಮೂಲಕವಾಗಲೀ ಅಥವಾ ಮುದ್ದಾಂ ಆಗಲಿ ಸಲ್ಲಿಸತಕ್ಕದ್ದಲ್ಲ.
16. ಮೀಸಲಾತಿಯಡಿಯಲ್ಲಿ **Online** ಅರ್ಜಿಯಲ್ಲಿ ಮೀಸಲಾತಿ ಸೌಲಭ್ಯಕ್ಕಾಗಿ ಇರುವ ಅಂಕಣವನ್ನು ಕಡ್ಡಾಯವಾಗಿ ಭರ್ತಿ ಮಾಡತಕ್ಕದ್ದು, ಅಂಕಣವನ್ನು ಖಾಲಿ ಬಿಟ್ಟಲ್ಲಿ ಸಾಮಾನ್ಯ ವರ್ಗ ಎಂದು ಪರಿಗಣಿಸಲಾಗುವುದು. ನಂತರ ಯಾವುದೇ ಹಂತದಲ್ಲಿ ಮೀಸಲಾತಿಯನ್ನು ಸೇರ್ಪಡೆ ಮಾಡಲು ಅವಕಾಶವಿರುವುದಿಲ್ಲ.
17. ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಯ ಮುದ್ರಿತ ಪ್ರತಿಯನ್ನು ಮುಂದಿನ ಉಪಯೋಗಕ್ಕಾಗಿ ಸಂರಕ್ಷಿಸಿ ಇಟ್ಟುಕೊಳ್ಳುವುದು.

18. ಮುದ್ರಿತ ಅರ್ಜಿಯು ಒಂದು ವೇಳೆ ಕಳೆದು ಹೋದಲ್ಲಿ ಮೇಲೆ ತಿಳಿಸಿದ ವೆಬ್‌ಸೈಟ್‌ನಲ್ಲಿ ನಿಮ್ಮ **"User ID and Password"** ಗಳನ್ನು ಭರ್ತಿ ಮಾಡಿ ಪ್ರತಿಯನ್ನು ಪಡೆದುಕೊಳ್ಳಬಹುದು.

19. ವೇಳಾ ಪಟ್ಟಿ (Calendar of Events)

1. ಅರ್ಜಿಯನ್ನು ತುಂಬಲು ನಿಗದಿಪಡಿಸಿದ ದಿನಾಂಕಃ 05.12.2018
2. ಅರ್ಜಿಯನ್ನು ಸಲ್ಲಿಸಲು ಕೊನೆಯ ದಿನಾಂಕ 25.12.2018
3. ನಿಗದಿತ ಶುಲ್ಕ ಪಾವತಿಸಲು ಕೊನೆಯ ದಿನಾಂಕ 27.12.2018

**Screen wise** ವಿವರ




ಚಿತ್ರ –1

2018–19ನೇ ಸಾಲಿನ **Karnataka Teachers Eligibility Test** ನ ಆನ್‌ಲೈನ್ ಅರ್ಜಿಯನ್ನು ಸಲ್ಲಿಸಲು, ಇಂಟರ್‌ನೆಟ್ ಬ್ರೌಸರ್‌ನ ವಿಳಾಸವನ್ನು ಭರ್ತಿ ಮಾಡುವ **address bar** ನಲ್ಲಿ **www.schooleducation.kar.nic.in** ವೆಬ್‌ಸೈಟ್ ವಿಳಾಸವನ್ನು (ಯು.ಆರ್.ಎಲ್.) ನಮೂದಿಸಿ **Enter Button** ಕ್ಲಿಕ್ ಮಾಡುವುದು. ಈ ವೆಬ್ ಪೇಜ್‌ನಲ್ಲಿ **"Online**

**Application for Karnataka Teachers Eligibility Test – 2018"** ಲಿಂಕ್‌ನ್ನು ಕ್ಲಿಕ್ ಮಾಡಿದಾಗ ಈ ಮೇಲೆ ತೋರಿಸಿದಂತೆ ವೆಬ್‌ಪೇಜ್ ತೆರೆದುಕೊಳ್ಳುತ್ತದೆ.




ಹೊಸ ಅರ್ಜಿಯನ್ನು ಭರ್ತಿ ಮಾಡಲು **New User** ಬಟನ್ ಕ್ಲಿಕ್ ಮಾಡಿ **Register** ಮಾಡಿಕೊಳ್ಳಬೇಕು ಅಥವಾ ಈಗಾಗಲೇ **Register** ಮಾಡಿಕೊಂಡು ನೀವು ನಮೂದಿಸಿದ ಮೊಬೈಲ್ ಸಂಖ್ಯೆಯಲ್ಲಿ **Username, Password** ಮಾಹಿತಿ ಪಡೆದಿದ್ದಲ್ಲಿ **Login** ಬಟನ್ ಕ್ಲಿಕ್ ಮಾಡಿ **Login** ಆಗಿ ಅರ್ಜಿಯನ್ನು ಪೂರ್ಣಗೊಳಿಸಬಹುದು.




**New User button** ಕ್ಲಿಕ್ ಮಾಡಿ ಈ ಮೇಲಿನ ಚಿತ್ರದಲ್ಲಿರುವಂತೆ ಎಲ್ಲಾ ಕಾಲಂಗಳನ್ನೂ ಕಡ್ಡಾಯವಾಗಿ ಭರ್ತಿ ಮಾಡಬೇಕು. ಅಭ್ಯರ್ಥಿಯ ಹೆಸರನ್ನು ಎಸ್.ಎಸ್.ಎಲ್.ಸಿ ಅಂಕಪಟ್ಟಿಯಲ್ಲಿರುವಂತೆ ಭರ್ತಿ ಮಾಡುವುದು. ಈ ಅಂಕಣದಲ್ಲಿ ಭರ್ತಿ ಮಾಡಿದ ಅಭ್ಯರ್ಥಿಯ ಹೆಸರನ್ನೇ ಮುಂದಿನ ಎಲ್ಲಾ ಹಂತದಲ್ಲಿ ಉಲ್ಲೇಖಿಸುವುದರಿಂದ ಜಾಗರೂಕತೆಯಿಂದ ತುಂಬಿರಿ. ಬಳಕೆದಾರರ ಹೆಸರು ಮತ್ತು ಪಾಸ್ವರ್ಡ್ (**Username and Password**) ಮುಂದೆ ಪ್ರವೇಶ ಪತ್ರ ಮತ್ತು ಇತರ ಪ್ರಮಾಣ ಪತ್ರಗಳನ್ನು ಪಡೆಯಲು ಅವಶ್ಯಕ ಇರುವುದರಿಂದ ಈ ಮಾಹಿತಿಯನ್ನು ಅತೀ ಜೋಪಾನವಾಗಿ ಸಂರಕ್ಷಿಸಿ ಇಟ್ಟುಕೊಳ್ಳುವುದು. (Note Down separately). ಇದನ್ನು ಕಳೆದುಕೊಂಡಲ್ಲಿ ಪಡೆಯುವುದು ಕಷ್ಟ ಸಾಧ್ಯವಾಗುತ್ತದೆ. ಭರ್ತಿ ಮಾಡಿರುವ ಎಲ್ಲಾ ಮಾಹಿತಿಯು ಸರಿಯಿದ್ದಲ್ಲಿ **Save Button** ಒತ್ತುವುದು. ಮುಂದಿನ **Login** ಅಂಕಣಕ್ಕೆ ಹೋಗುವುದು.




**Save Button Click** ಮಾಡಿದ ನಂತರ ಮೇಲೆ ತೋರಿಸಿದಂತೆ **Login** ಅಂಕಣ ಬರುತ್ತದೆ. ಹಾಗೂ ನಿಮ್ಮ ನೋಂದಣಿ ವಿವರವನ್ನು ನಿಮ್ಮ ನೋಂದಾಯಿಸಿದ ಮೊಬೈಲ್ ಸಂಖ್ಯೆಗೆ **SMS** ಮೂಲಕ ತಿಳಿಸಲಾಗುವುದು.

**Login** ಅಂಕಣದಲ್ಲಿ ಎರಡು ಕಾಲಂಗಳಿದ್ದು ಈ ಕಾಲಂಗಳಲ್ಲಿ ಮೊಬೈಲ್ ಸಂಖ್ಯೆಗೆ ಬಂದಿರುವ **User Id and Password** ನ ಮಾಹಿತಿಯನ್ನು ನೋಡಿಕೊಂಡು ಭರ್ತಿ ಮಾಡಬೇಕು.

**Login** ನಂತರ **Personal Details, Education details, Eligibility, Photo & Signature, Declaration, Payment, Print** ಹಾಗೂ **Logout** ಅಂಕಣಗಳನ್ನು ತೆರೆಯಲು ಬಟನ್‌ಗಳನ್ನು ಕಾಣಬಹುದಾಗಿದೆ.

ಈ ಮೇಲ್ಕಂಡ ಪ್ರತಿ ಅಂಕಣದಲ್ಲಿ ಮಾಹಿತಿಯನ್ನು ಭರ್ತಿ ಮಾಡಿ **Save Button** ಒತ್ತುವುದು. **Save Button** ಒತ್ತುವ ಮುನ್ನ ಭರ್ತಿ ಮಾಡಿದ ಮಾಹಿತಿಯನ್ನು ಖಚಿತ ಪಡಿಸಿಕೊಳ್ಳುವುದು ತುಂಬಾ ಅವಶ್ಯಕವಾಗಿರುತ್ತದೆ.

ಈ ಮೇಲೆ ತಿಳಿಸಿರುವ ಪ್ರತಿ ಅಂಕಣಗಳ ಚಿತ್ರಗಳನ್ನು ಮುಂದಿನ ಪುಟಗಳಲ್ಲಿ ನೋಡಬಹುದಾಗಿದೆ.

## Personal Details




ಈ ಪುಟದಲ್ಲಿ ಅಭ್ಯರ್ಥಿಯ ವಿವರಗಳಾದ ತಾಯಿಯ ಹೆಸರು, ತಂದೆಯ ಹೆಸರು, ಪ್ರವರ್ಗ, ಲಿಂಗ, ಜನ್ಮ ದಿನಾಂಕ (ಎಸ್.ಎಸ್.ಎಲ್.ಸಿ ಅಂಕ ಪಟ್ಟಿಯಲ್ಲಿರುವಂತೆ) ಭರ್ತಿಮಾಡುವುದು. ಅಭ್ಯರ್ಥಿಯು ವಿಕಲಚೇತನರಾಗಿದ್ದಲ್ಲಿ ವಿವರವನ್ನು ತುಂಬುವುದು. ಅಭ್ಯರ್ಥಿಯ ಪ್ರವರ್ಗ ಹಾಗೂ ಅಭ್ಯರ್ಥಿಯು ವಿಕಲಚೇತನ ವಿವರಗಳು ಅರ್ಹತೆ ನಿರ್ಧರಿಸುವಲ್ಲಿ ಪ್ರಮುಖವಾಗಿರುವುದರಿಂದ ನಿಖರವಾಗಿ ಭರ್ತಿ ಮಾಡುವುದು ಅವಶ್ಯಕವಾಗಿರುತ್ತದೆ.

**Educational Qualifications :**




ಈ ಪುಟದಲ್ಲಿ ಅಭ್ಯರ್ಥಿಯು ಹೊಂದಿರುವ ಶೈಕ್ಷಣಿಕ ವಿದ್ಯಾರ್ಹತೆಗಳಾದ ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿಯ ವಿವರಗಳನ್ನು ಆಯಾ ಅಂಕಣದ ಮುಂದಿರುವ Check Box ನ್ನು ಅಯ್ಕೆ ಮಾಡಿ ಮಾಹಿತಿಗಳನ್ನು ತುಂಬಾ ಜಾಗರೂಕತೆಯಿಂದ ಭರ್ತಿ ಮಾಡುವುದು.

ಹಾಗೂ ವೃತ್ತಿ ಪರ ವಿದ್ಯಾರ್ಹತೆಯನ್ನು ಹೊಂದಿದ್ದಲ್ಲಿ ಅಥವ ಅಂತಿಮ ವರ್ಷದಲ್ಲಿದ್ದರೆ ವಿವರಗಳನ್ನು ತುಂಬುವುದು.

- 2 Year Diploma in Elementary Education /2 Year D.Ed
- 2 Year Diploma in Education (Special Education),
- 2 Year TCH
- 1 Year Bachelor in Education (B.Ed) /2 Year Bachelor in Education (B.Ed)
- One Year B.Ed (Special Education),
- 4 year Bachelor of Elementary Education (B.El.Ed),
- 4 year BA/BSc.Ed / 4 year BA.Bed/BSc.Ed

ಅಂಕಣಗಳಿದ್ದು ಅಭ್ಯರ್ಥಿಯು ತಾನು ಹೊಂದಿರುವ ವಿದ್ಯಾರ್ಹತೆಗೆ ಅನುಗುಣವಾಗಿ ಆಯಾ ಅಂಕಣದ ಮುಂದಿರುವ Check Box ನ್ನು ಅಯ್ಕೆ ಮಾಡಿ ಮಾಹಿತಿಗಳನ್ನು ಭರ್ತಿ ಮಾಡುವುದು.

**Eligibility Test Details :**




ಈ ಅಂಕಣ ಪ್ರಮುಖವಾಗಿದ್ದು, ಅಭ್ಯರ್ಥಿಯು ಹಾಜರಾಗಲಿರುವ ಅರ್ಹತಾ ಪರೀಕ್ಷೆಯ ವಿವರಗಳನ್ನು ಭರ್ತಿ ಮಾಡಬೇಕಾಗಿರುತ್ತದೆ. ಈ ಮಾಹಿತಿಗಳ ಆಧಾರದ ಮೇಲೆ ಅಭ್ಯರ್ಥಿಯ ಪ್ರಶ್ನೆ ಪತ್ರಿಕೆ ನಿರ್ಧಾರವಾಗುತ್ತದೆ. ಆದ್ದರಿಂದ ಈ ಅಂಕಣ ಭರ್ತಿ ಮಾಡುವ ಮುನ್ನ **Notification** ನ್ನು ಸಂಪೂರ್ಣವಾಗಿ ಓದಿಕೊಳ್ಳವುದು. ಇದರಲ್ಲಿ ತಪ್ಪು ಭರ್ತಿ ಮಾಡಿದಲ್ಲಿ ಅಭ್ಯರ್ಥಿಗಳೇ ನೇರ ಹೊಣೆಗಾರರಾಗಿರುತ್ತಾರೆ.

**Photo & Signature Upload :**




ಈ ಅಂಕಣದಲ್ಲಿ ಇತ್ತೀಚಿನ ಭಾವಚಿತ್ರ ಹಾಗೂ ಅಭ್ಯರ್ಥಿಯ ಸಹಿ ಇವುಗಳನ್ನು ಅಪ್‌ಲೋಡ್ ಮಾಡಬೇಕಾಗಿದ್ದು, ಒಂದು ಬಿಳಿ ಹಾಳೆಯ ಮೇಲೆ ಭಾವಚಿತ್ರವನ್ನಿಟ್ಟು ಸ್ಕ್ಯಾನ್ ಮಾಡಿ **Image** ಸೃಜಿಸಿಕೊಳ್ಳತಕ್ಕದ್ದು, ಮತ್ತೊಂದು ಬಿಳಿಯ ಹಾಳೆಯಲ್ಲಿ ಕಪ್ಪು ಸ್ಕೆಚ್ ಪೆನ್ ಅಥವಾ ಕಪ್ಪು ಮಾರ್ಕರ್ ಪೆನ್‌ನಲ್ಲಿ ಅಭ್ಯರ್ಥಿಯ ಸಹಿಯನ್ನು ಮಾಡಿ ಸ್ಕ್ಯಾನ್ ಮಾಡಿ **Image** ಸೃಜಿಸಿಕೊಂಡು ಸಿದ್ಧವಾಗಿಟ್ಟುಕೊಳ್ಳಬೇಕು. ಈ **Image** ಗಳನ್ನು **JPEG** ಫಾರ್ಮ್ಯಾಟ್‌ನಲ್ಲಿ ಇರತಕ್ಕದ್ದು ಕೆಳಗೆ ನಮೂದಿಸಿರುವ ತಾಂತ್ರಿಕ ವಿಷಯಗಳಂತೆ ಅಭ್ಯರ್ಥಿಯು ಭಾವಚಿತ್ರ ಹಾಗೂ ಸಹಿಯನ್ನು ಸ್ಕ್ಯಾನ್ ಮಾಡತಕ್ಕದ್ದು.

ಭಾವಚಿತ್ರ – **size 5 kb to 40 kb**

ಸಹಿ – **size 5 kb to 40 kb**

**Declaration:**




ಈ ಅಂಕಣದಲ್ಲಿ ಈವರೆಗೂ ಭರ್ತಿ ಮಾಡಿರುವ ಮಾಹಿತಿಯು ಸರಿಯಾಗಿದೆ ಎಂದು ಖಾತ್ರಿ ಪಡಿಸಬೇಕಾಗುವುದು. ಒಮ್ಮೆ ಖಾತ್ರಿ ಪಡಿಸಿದ ನಂತರ ಯಾವುದೇ ಮಾಹಿತಿಯ ಬದಲಾಣೆಗೆ ಅವಕಾಶವಿರುದುವುದಿಲ್ಲ.

**Payment:**



**Pay Now** ಬಟನ್ ಕ್ಲಿಕ್ ಮಾಡಿ ಅಭ್ಯರ್ಥಿಯು **Credit card/ Debit Card/ Net Banking/ Cash** ಮೂಲಕ ಶುಲ್ಕ ಪಾವತಿಸಬಹುದಾಗಿದೆ.

ವಿಕಲಚೇತನ ಅಭ್ಯರ್ಥಿಗಳಿಗೆ ಶುಲ್ಕ ವಿನಾಯಿತಿ ಇರುವುದರಿಂದ ನೇರವಾಗಿ **Print** ಒತ್ತಿ ಅಭ್ಯರ್ಥಿಯ ಪೂರ್ಣ ವಿವರವುಳ್ಳ ಅರ್ಜಿಯು ಮುದ್ರಿತವಾಗುತ್ತದೆ.

## ಎರಡನೇ ಹಂತ (SECOND STAGE )

**Log in :**

ಪರೀಕ್ಷಾ ಶುಲ್ಕ ಪಾವತಿಸಿರುವುದು ಖಾತ್ರಿಯಾದ ಬಳಿಕ **Log in** ಅಂಕಣ ತೆರೆಯುವುದು.
**Username, Password** ಮಾಹಿತಿ ಭರ್ತಿ ಮಾಡಿ **Login** ಬಟನ್ ಕ್ಲಿಕ್ ಮಾಡಿ.



**<u>Print :</u>**




**“Print” Button** ಅಭ್ಯರ್ಥಿಯು ಪರೀಕ್ಷಾ ಶುಲ್ಕ ಪಾವತಿಸಿರುವುದು ಖಾತ್ರಿಯಾದ ಬಳಿಕ **Enable** ಆಗುವುದು. **“Print”** ಒತ್ತಿದರೆ ಅಭ್ಯರ್ಥಿಯ ಪೂರ್ಣ ವಿವರವುಳ್ಳ ಅರ್ಜಿಯು ಮುದ್ರಿತವಾಗುತ್ತದೆ. ಇದನ್ನು ಮುಂದಿನ ಎಲ್ಲಾ ಹಂತಗಳಲ್ಲಿಯೂ ಸಹ ಹಾಜರುಪಡಿಸಬೇಕಾಗಿರುವುದರಿಂದ ಜೋಪಾನವಾಗಿಟ್ಟುಕೊಳ್ಳಬೇಕು. ಈ ಅರ್ಜಿಯು ಮೂಲ ಅರ್ಜಿಯಾಗಿದ್ದು ಯಾವುದೇ ಬದಲಾವಣೆಗಳಿಗೆ ಅವಕಾಶವಿರುವುದಿಲ್ಲ.